ವಿಷಯ :- ರಾಜ್ಯದಲ್ಲಿ ಕಬ್ಬು ಬೆಳೆಯುವ ಕ್ಷೇತ್ರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 813 (716)

ಶ್ರೀ ಬಸವನಗೌಡ ರಾ. ಪಾಟೀಲ್ (ಬಿಜಾಪುರ) :- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಒಟ್ಟು ಕಬ್ಬು ಬೆಳೆಯುವ ಕ್ಷೇತ್ರವೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು) ; ಬಿಜಾಪುರ ಜಿಲ್ಲೆಗೆ ಸಂಬಂಧಿಸಿದಂತೆ ಕಬ್ಬು ಬೆಳೆಯುವ ಕ್ಷೇತ್ರದ ತಾಲ್ಲೂಕುವಾರು ವಿವರ ನೀಡುವುದು ;

ಆ) ರಾಜ್ಯದಲ್ಲಿ ಕಬ್ಬು ಕಾರ್ಖಾನೆಗೆ ಹೋಗದೆ ಒಣಗಿ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದರೆ ಅಂತಹ ಒಣಗಿದ ಕಬ್ಬಿನ ಕ್ಷೇತ್ರವೆಷ್ಟು ; ಜಿಲ್ಲಾವಾರು ವಿವರ ನೀಡುವುದು) ;

ಇ) ಹಾನಿಗೊಳಗಾದ ರೈತರಿಗೆ ಪರಿಹಾರ ಅಥವಾ ಸಹಾಯ ಧನ ನೀಡುವ ಪ್ರಸ್ತಾಪ ಸರ್ಕಾರದವರ ಮುಂದಿದೆಯೇ, ಹಾಗಿಲ್ಲದಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದ ವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಉಮೇಶ್ ವಿ. ಕತ್ತಿ (ಸಕ್ಕರೆ ಸಚಿವರು) :-

ಅ) 1995-96 ರ ಸಾಲಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ 2.57 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬಿನ ಬೆಳೆ ಇರುವ ಅಂದಾಜಿರುತ್ತದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-ಅ ದಲ್ಲಿ ಒದಗಿಸಲಾಗಿದೆ. ಬಿಜಾಪುರ ಜಿಲ್ಲೆಯ ತಾಲ್ಲೂಕುವಾರು ಕಬ್ಬು ಬೆಳೆದಿರುವ ಕ್ಷೇತ್ರದ ಅಂದಾಜು ವಿವರ ಕೆಳಕಂಡಂತೆ ಇರುತ್ತದೆ.

	ತಾಲ್ಲೂಕು	ಕಬ್ಬಿನ ಕ್ಷೇತ್ರ (ಹೆಕ್ಟೇರ್‌ನಲ್ಲಿ)
1)	ಬಾದಾಮಿ	72
2)	ಬಾಗಲಕೋಟೆ	134
3)	ಬಸವನ ಬಾಗೇವಾಡಿ	24
4)	ಬಿಜಾಪುರ	1000
5)	ಬೀಳಗಿ	450
6)	ಹುನಗುಂದ	-
7)	ಇಂಡಿ	4040
8)	ಜಮಖಂಡಿ	12010
9)	ಮುದ್ದೇಬಿಹಾಳ	-
10)	ಮುಧೋಳ	15091
11)	ಸಿಂಧಗಿ	1050
	ಒಟ್ಟು	33871

ಆ) ರಾಜ್ಯದಲ್ಲಿ ಹೆಚ್ಚುವರಿ ಕಬ್ಬು ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಒಣಗಿದ ಕಬ್ಬಿನ ಕ್ಷೇತ್ರದ ಬಗ್ಗೆ ಬಂದಿರುವುದಿಲ್ಲ.

ಇ) ಇಲ್ಲ.

ESTIMATED CANE PRODUCTION IN KARNATAKA DURING 1995-96

(DISTRICTWISE INFORMATION)

Sl. No.	District name	Cane area (in hectres)	Estimated cane production (in lakh MTs.)
1.	Bangalore Urban	150	0.15
2.	Bangalore Rural	1790	1.30
3.	Belgaum	89000	70.00
4.	Bellary	8752	5.40
5.	Bidar	19035	10.16
6.	Bijapur	33871	26.00
7.	Chikmagalur	2000	1.50
8.	Chitradurga	6850	6.00
9.	Dakshina Kannada	2601	1.45
10.	Dharwad	5715	4.00
11.	Gulbarga	4500	3.50
12.	Hassan	7430	7.43
13.	Kodagu	24	0.01
14.	Kolar	3480	2.90
15.	Mandya	36508	38.50
16.	Mysore	16000	16.50
17.	Raichur	3120	2.02
18.	Shimoga	13429	15.00
19.	Tumkur	1086	1.08
20.	Uttara Kannada	1999	1.50
	Total	257340	214.40

ವಿಷಯ :- ಬಸವಕಲ್ಯಾಣಕ್ಕೆ ಒಳಚರಂಡಿ ಯೋಜನೆ ಜಾರಿಗೆ ಒತ್ತಾಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 815 (749)

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) :- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?